ವಿಷಯ:- ರಾಜ್ಯದಲ್ಲಿ ಸೈನಿಕ ಕಲ್ಯಾಣ ವತಿಯಿಂದ ಮಾಜಿ ಸೈನಿಕರಿಗೆ ಜಾಗ ನೀಡಿರುವುದು.

1283 (2301) **ಶ್ರೀ ಯು.ಆರ್ ಸಭಾಪತಿ (ಉಡುಪಿ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಜನ ಮಾಜಿ ಸೈನಿಕರು ಭೂಮಿಯ ಮಂಜೂರಾತಿಗಾಗಿ ಕಾಯುತ್ತಿದ್ದಾರೆ ಎಷ್ಟು ಜನಕ್ಕೆ ಜಾಗ ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಸೈನಿಕ ಕಲ್ಯಾಣ ಇಲಾಖೆಯಲ್ಲಿ ಜಾಗವನ್ನು ಮಂಜೂರು ಮಾಡುವಾಗ ಯಾವ ಕ್ರಮವನ್ನು ಅನುಸರಿಸಲಾಗುತ್ತಿದೆ. ಇಲ್ಲಿ ತಾರತಮ್ಯ ನಡೆಯುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ರಾಜ್ಯದಲ್ಲಿ ಒಟ್ಟು 2428 ಮಾಜಿ ಸೈನಿಕರು ಭೂಮಿ ಮಂಜೂರಾತಿಗಾಗಿ ಕಾಯುತ್ತಿದ್ದಾರೆ 477 ಜನಕ್ಕೆ ಭೂ ಮಂಜೂರಾತಿ ನೀಡಲಾಗಿದೆ. (ಬೆಂಗಳೂರು (ನಗರ) ಕೋಲಾರ, ಮೈಸೂರು ಕೊಡಗು ಜಿಲ್ಲೆ ಹೊರತುಪಡಿಸಿ)

ಆ) ಜಮೀನು ಮಂಜೂರು ಮಾಡುವ ಕ್ರಮವು ಸೈನಿಕ ಇಲಾಖೆಗೆ ಇರುವುದಿಲ್ಲ. ಭೂಮಂಜೂರಾತಿ ನಿಯಮಗಳಡಿ ಕಂದಾಯ ಇಲಾಖೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ತಾರತಮ್ಯದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಜಮೀನು ಲಭ್ಯತೆಯ ಆಧಾರದ ಮೇಲೆ ಆಧ್ಯತೆಯ ಮೇಲೆ ಅರ್ಹ ವ್ಯಕ್ತಿಗಳಿಗೆ ಮಂಜೂರು ಮಾಡಲಾಗುವುದು.

ವಿಷಯ:- ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆಯಂಚಿನಲ್ಲಿ ಸ್ಥಿತ್ಯಗೊಂಡಿರುವ ಪ್ರದೇಶಗಳಿಗೂ ಸಮರ್ಪಕ ನೀರು.

1292 (862) **ಶ್ರೀ ಹೆಚ್. ಶಿವಪ್ಪ (ಹರಿಹರ):-** ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆಯಂಚಿನಲ್ಲಿ ಸ್ಥಿತ್ಯಗೊಂಡಿರುವ ಪ್ರದೇಶಗಳಿಗೂ ಸಮರ್ಪಕ ನೀರು ನಿರ್ವಹಣೆಯನ್ನು ಖಾತರಿಗೊಳಿಸಲು ಹಾಗೂ ಸಾಧ್ಯಗೊಳಿಸಲು ಅನುವಾಗುವಂತೆ ಭದ್ರಾ ಅಚ್ಚುಕಟ್ಟು ಪ್ರದೇಶದ ಆಧುನೀಕರಣವನ್ನು ಕೈಗೊಳ್ಳಲು ಸರ್ಕಾರವು ಯೋಜಿಸಿರುತ್ತಿರುವುದು ವಾಸ್ತವ ಸಂಗತಿಯೇ ಹೇಗೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಭದ್ರಾ ನಾಲೆಯ ಆಧುನೀಕರಣದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.